ದಿನಾಂಕಃ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ **7** ರಿಂದ **9** ನೇ ಪ್ರತಿವಾದಿಗಳ ಪರ ಶ್ರೀ ಎನ್ ವಾಯ್ ಪಿ ವಕೀಲರಿಂದಃ

9. ನಾನು 6 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಪ್ರತಿವಾದ ಪತ್ರದ ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮಾಹಿತಿಯನ್ನು ನನ್ನ ಚಿಕ್ಕಪ್ಪನಾದ ಚೆನ್ನಪ್ಪ ವಕೀಲರಿಗೆ ಕೊಟ್ಟಿರುತ್ತಾರೆ. ಪ್ರತಿವಾದಿ 7 ರಿಂದ 9 ಅವರು ಸಲ್ಲಿಸಿದ ಎದುರು ಮಾಗಣಿ ಮಾಹಿತಿ ನನಗಿದೆ. ನನ್ನ ತಂದೆಯ ತಂದೆ ಯಲ್ಲಪ್ಪ ಅವರ ಹೆಂಡತಿಯ ಹೆಸರು ಮರಿತಂಗೆಮ್ಮ. ಸದರಿಯವರಿಗೆ ಒಟ್ಟು ಐದು ಜನ ಮಕ್ಕಳು. ಅವರೆಂದರೆ, ಸಕ್ರವ್ವ, ಸಿದ್ಧಲಿಂಗಪ್ಪ, ಚೆನ್ನಪ್ಪ, ಪಾರ್ವತೆವ್ವ ಮತ್ತು ಸಾವಕ್ಕ. ಇವರ ಪೈಕಿ ಚೆನ್ನಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ಚೆನ್ನಪ್ಪನ ಹೆಂಡತಿ ನೀಲವ್ವ ಸಹ ತೀರಿಕೊಂಡಿದ್ದಾರೆ ಎಂದರೆ ಸರಿ. ಇವರಿಗೆ ಯಾವುದೇ ಸಂತಾನ ಇಲ್ಲ ಎಂದರೆ ಸರಿ. ಯಲ್ಲಪ್ಪನ ಮೊದಲನೆ ಮಗಳು ಸಕ್ರವ್ವ ತೀರಿಕೊಂಡಿದ್ದಾರೆ. ಸದರಿ ಸಕ್ರವ್ವನ ಗಂಡ ಮಹಾದೇವಪ್ಪ ಸಹ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ದಂಪತಿಗಳಿಗೆ ಯಲ್ಲವ್ವ ಎಂಬ ಒಬ್ಬ ಮಗಳು ಇದ್ದಾಳೆ ಎಂದರೆ ಸರಿ.

10. ನಮ್ಮ ಅಜ್ಜ ಯಲ್ಲಪ್ಪ 50 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಯಲ್ಲಪ್ಪ ಜೀವಂತ ಇರುವವರೆಗೂ ಅವರೇ ದಾವಾ ಸ್ವತ್ತುಗಳ ಕಬ್ಜಾ ವಹಿವಾಟು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಮೃತ ಚೆನ್ನಪ್ಪ ಮಾಡುತ್ತಿದ್ದರು ಎಂದರೆ ಸರಿ. ಯಲ್ಲಪ್ಪ ಜೀವಂತ ಇರುವಾಗಲೇ ಸ್ವತ್ತುಗಳ ಕಬ್ಜಾ ವಹಿವಾಟನ್ನು ತಮ್ಮ ಗಂಡು ಮಕ್ಕಳಿಗೆ ಬಿಟ್ಟು ಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ದಾವಾ ಆಸ್ತಿಗಳಿಂದ ಸಾಕಷ್ಟು ಆದಾಯ ಗಳಿಸಿ ಅವುಗಳನ್ನು ಉಳಿಸುತ್ತಿದ್ದ ಎಂದರೆ ಸರಿಯಲ್ಲ, ಸಾಕ್ಷಿ ಆತನ ಜೀವನ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದು ನುಡಿಯುತ್ತಾರೆ. ಯಲ್ಲಪ್ಪ ಮೃತ ಪಟ್ಟ ನಂತರ ಮನೆತನದ ಹಿರಿತನವನ್ನು ನನ್ನ ತಂದೆ ಹಾಗೂ ಚಿಕ್ಕಪ್ಪ ಮಾಡುತ್ತಿದ್ದರು. ಯಲ್ಲಪ್ಪ ಸಂಪಾದಿಸಿದ ಆದಾಯದಿಂದ ನಮ್ಮ ತಂದೆ ಹಾಗೂ ಚಿಕ್ಕಪ್ಪ ಸಾಕಷ್ಟು ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ವ್ಯವಹಾರದಿಂದ ಬಂದ ಹಣದಿಂದ ಖರೀದಿ ಮಾಡಿದ್ದಾಗಿ ನುಡಿಯುತ್ತಾರೆ. ದಾವಾ ಆಸ್ತಿಗಳ ಸರ್ವೇ ನಂಬರ ಮತ್ತು ಕ್ಷೇತ್ರ

ಹೇಳಲಾಗುತ್ತದೆಯಾ ಎಂದರೆ ಇಲ್ಲ. ಎದುರು ಮಾಗಣಿಯ ಆಸ್ತಿಯಲ್ಲಿ ನನ್ನ ತಂದೆ, ಚಿಕ್ಕಪ್ಪ, ಸಾವಕ್ಕ, ಸಕ್ರವ್ವ ಮತ್ತು ಪಾರ್ವತೆವ್ವನ ನಡುವೆ ಹಿಸ್ಸಾ-ದಿಸ್ಸಾ ಆಗಿಲ್ಲ ಎಂದರೆ ಸರಿಯಲ್ಲ. ಆ ಸಂಬಂಧ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ತಂದೆ, ಚಿಕ್ಕಪ್ಪ ಮತ್ತು ಅತ್ತೆಯರ ನಡುವೆ ವಾಟ್ನಿ ಪತ್ರ ನೋಂದ ಆಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಈ ಮೊದಲು ದಾವಾ ಹಾಕಿ ಹಿಸ್ಸಾ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ. ನನ್ನ ಅಜ್ಜ ಹಿಂದೆ ಹಕ್ಕನ್ನು ಬಿಟ್ಟು ಕೊಟ್ಟಿದ್ದಾರೆ, ಆ ಸಂಬಂಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ.

11. ಎದುರು ಮಾಗಣಿ ಆಸ್ತಿಗಳಲ್ಲಿ ನನ್ನ ತಂದೆ ಸಕ್ರವ್ವ ಮತ್ತು ಯಲ್ಲವ್ವಳಿಗೆ ಮಾತ್ರ ಸಮಾನವಾದ ಹಿಸ್ಸಾ ಇದೆ ಎಂದರೆ ಸರಿಯಲ್ಲ. ವಾದಿಯರು ಮತ್ತು 2 ರಿಂದ 6 ನೇ ಪ್ರತಿವಾದಿಗಳಿಗೆ 1 ನೇ ಪ್ರತಿವಾದಿಯ ಹಿಸ್ಸೇಯಲ್ಲಿ ಮಾತ್ರ ಹಕ್ಕಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಯಲ್ಲಪ್ಪನಿಗೆ ಪಿತ್ರಾರ್ಜಿವಾಗಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ.

ಉಳಿದ ಪಾಟೀ ಸವಾಲ ವಾದಿಯರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.